ಡಾ:ಹೆಚ್.ಸಿ.ಮಹಾದೇವಪ್ಪ : ನಿಗದಿ ಮಾಡಿದ ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದಾರೆ. ಕ್ರಿಯಾ ಯೋಜನೆ ತಯಾರು ಮಾಡಿದಾಗ ಕ್ರಿಯಾ ಯೋಜನೆಗಳ ಮುಖಾಂತರ ಬಿಡುಗಡೆ ಮಾಡಿದ ಹಣವನ್ನು ಬಳಸಿಕೊಂಡು ಈ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಯಾವುದೇ ಕಾರ್ಯಕ್ರಮ ನೂರಕ್ಕೆ ನೂರರಷ್ಟು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಆದರೆ ಅದು ಆಗಲೇ ಬೇಕೆಂದು ಸರ್ಕಾರದ ಉದ್ದೇಶ ಇರುತ್ತದೆ. ಕಾರ್ಯಕ್ರಮಗಳು ಉದ್ದೇಶ ಇರುತ್ತದೆ. ಮತ್ತು ಎಲ್ಲಾ ಸಂಸ್ಥೆಗಳ ಉದ್ದೇಶ ಆಗಿರುತ್ತದೆ. ಸರ್ಕಾರ ಅವರಿಗೆ ಅಗ್ರಹ ಪೂರ್ವಕವಾಗಿ ಮುಂದಿನ ವರ್ಷಗಳಲ್ಲಿ ಸೂಚನೆ ಕೊಡುತ್ತದೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ಪ್ರಶ್ನೆ ಕೇಳಿ, ದಯಮಾಡಿ ಕುಳಿತುಕೊಳ್ಳಿ. ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿದೆ. ಒಂದು ಪ್ರಶ್ನೆಗೆ ಉತ್ತರ ಸಿಕ್ಕಿದರೆ ಹೇಗೆ? ಆರು ಗಂಟೆ ಒಳಗೆ ಎಲ್ಲಾ ಪ್ರಶ್ನೆಗಳನ್ನು ಮುಗಿಸಬೇಕು. ಎಲ್ಲಾ ಸದಸ್ಯರಿಗೂ ಅವರವರ ಪ್ರಶ್ನೆಗಳಿಗೆ ಉತ್ತರ ಬರಬೇಕು. ಏನಾದರೂ ಹೆಚ್ಚಿಗೆ ಸಮಸ್ಯೆ ಇದ್ದರೆ ನೀವು ಸಚಿವರ ಹತ್ತಿರ ಹೋಗಿ ಮಾತನಾಡಿ ನಿಮ್ಮ ಸಮಸ್ಯೆ ಪರಿಹಾರ ಮಾಡಿಕೊಳ್ಳಿ.

ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ.

97(1289) ಶ್ರೀರಾಮರೆಡ್ಡಿ ಜಿ.ವಿ(ಬಾಗೇಪಲ್ಲಿ) ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ. ಬೇಸಿಗೆ ಕಾಲ ಸಮೀಪಿಸುತ್ತಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಮಾನ್ಯ ಶ್ರೀ ಬಿ.ಸತ್ಯನಾರಾಯಣ. (ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು)

ಅ. ಬಂದಿದೆ.

ಆ. ಮುಂಬರುವ ಬೇಸಿಗೆಯಲ್ಲಿ ಸುಮಾರು 5000 ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದೆಂದು ಅಂದಾಜು ಮಾಡಲಾಗಿದೆ. ಈ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಆದ್ಯತೆ ಮೇಲೆ ನಿಭಾಯಿಸಲು ತಾಲ್ಲೂಕು ಮಟ್ಟದ ಕಾರ್ಯಪಡೆ ರಚಿಸಲಾಗಿದೆ ಹಾಗೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಸಮರ್ಥವಾಗಿ ಪರಿಹರಿಸಲು, ಮುಂದುವರಿದ ಯೋಜನೆಗಳ ಪ್ರಗತಿ ತೀವ್ರಗೊಳಿಸಲು, ಪೂರ್ಣಗೊಂಡಿರುವ ಯೋಜನೆಗಳನ್ನು ವಿದ್ಯುದ್ದಿಕರಣಗೊಳಿಸಿ ಕಾರ್ಯಗತಗೊಳಿಸಲು, ದುರಸ್ಥಿಗೊಳಗಾದ ಯೋಜನೆಗಳನ್ನು ಜಾಗ್ರತೆಯಾಗಿ ಸುಸ್ಥಿತಿಯಲ್ಲಿಡಲು, ಕೊಳವೆ ಬಾವಿಗಳ ಆಳ ಹೆಚ್ಚಿಸಲು, ಹೈಡ್ರೋಫ್ರಾಕ್ಟರಿಂಗ್ ಮಾಡಲು, ಮೋಟಾರ್‌ಪಂಪ್ ಅಳವಡಿಸಿ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲು, ಅಗತ್ಯವಿರುವೆಡೆ ಹೊಸ ಕೊಳವೆ ಬಾವಿಗಳನ್ನು ಕೊರೆಯಲು, ಖಾಸಗಿ ಬೋರ್‌ವೆಲ್‌ಗಳನ್ನು ಚಾಲ್ತಿ ಅಂತರ್ಜಲ ಸಂರಕ್ಷಣಾ ಕಾಯಿದೆಯನ್ವಯ ಪರಿಹಾರ ನೀಡಿ ವಶಪಡಿಸಿಕೊಂಡು ನೀರು ಪೂರೈಕೆ ವ್ಯವಸ್ಥೆ ಮಾಡಲು ಮತ್ತು ತುರ್ತು ಸಂದರ್ಭಗಳಲ್ಲಿ

ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಸಾಗಾಣಿಕೆ ಮುಖೇನ ನೀರು ಪೂರೈಕೆ ಮಾಡಲು, ಜಿಲ್ಲಾ ಪಂಚಾಯತ್ / ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದೆ.

ಶ್ರೀ ಜೆ.ಎಚ್.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ಸಮಂಜಸ ಉತ್ತರ ಕೊಟ್ಟಿಲ್ಲ. ಒಂದು ಕತೆ ಬರೆದು ಕೊಟ್ಟಿದ್ದಾರೆ. ನಿರ್ದಿಷ್ಟವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ. ನೀರಿನ ಸಮಸ್ಯೆ ಬಗ್ಗೆ ಬೆಳಿಗ್ಗೆ ಎಲ್ಲಾ ಉತ್ತರ ಕೊಟ್ಟಿದ್ದೀರಿ. ನಾನು ಅದನ್ನು ಹೆಚ್ಚಿಗೆ ಉದ್ದ ಮಾಡುವುದಕ್ಕೆ ಹೋಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆ ಹಿನ್ನೆಲೆಯಲ್ಲಿ ನಾನು ಈ ಪ್ರಶ್ನೆ ಕೇಳಿದ್ದು. ನಾನು ಮೊನ್ನೆ ಕೂಡ ಹೇಳಿದ್ದೇನೆ. ನಮಗೆ ಬಿಡುಗಡೆ ಮಾಡತಕ್ಕಂತಹ ಹಣ ಕಡಿಮೆ ಇದೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಮತ್ತು ಈಗಲೇ ಎಲ್ಲವನ್ನೂ ತಯಾರಿ ನಡೆಸಬೇಕು ಎಂದು ಹೇಳುತ್ತಿದ್ದೇನೆ. ಏಕೆಂದರೆ, ಬೆಳಿಗ್ಗೆ ಸಾಕಷ್ಟು ಉತ್ತರ ಕೊಟ್ಟಿದ್ದೀರಿ. ನಾನು ಉದ್ದ ಮಾಡುವುದಕ್ಕೆ ಹೋಗುವುದಿಲ್ಲ. ಕೋಲಾರ ಜಿಲ್ಲೆಯ ಬಗ್ಗೆ ನಿರ್ದಿಷ್ಟವಾಗಿ ಹೆಚ್ಚು ಹಣ ಬಿಡುಗಡೆ ಮಾಡಬೇಕು. ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು.

ಶ್ರೀ ಬಿ.ಸತ್ಯನಾರಾಯಣ : ಸನ್ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಸನ್ಮಾನ್ಯ ಕಂದಾಯ ಸಚಿವರು ಹಾಗೂ ಮುಖ್ಯ ಮಂತ್ರಿಗಳು ರಾಜ್ಯದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಡೆದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ್ದಾರೆ. ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಕೋಲಾರದ ಬಗ್ಗೆ ಹೆಚ್ಚು ಮಾಹಿತಿ ಕೇಳುತ್ತಿದ್ದಾರೆ. ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪರಗೋಡು ಗ್ರಾಮದ ಬಳಿ ಚಿತ್ರಾವದಿ ನದಿಗೆ ಅಡ್ಡಲಾಗಿ ಒಂದು ಯೋಜನೆ ಮಾಡಿ ಬಾಗೇಪಲ್ಲಿ ಗುಡಿಬಂಡೆ ಪಟ್ಟಣ ಹಾಗೂ ಮಾರ್ಗ ಮಧ್ಯದಲ್ಲಿ 88 ಗ್ರಾಮೀಣ ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕಂತಹ 966.18 ಲಕ್ಷ ರೂ ಅಂದಾಜಿಗೆ ನಗರಾಭಿವೃದ್ಧಿ ಇಲಾಖೆಯಿಂದ ಅನುಮೋದನೆ ಆಗಿದೆ.

ಶ್ರೀ ಜೆ.ಎಚ್.ಶ್ರೀರಾಮರೆಡ್ಡಿ : ಅದಕ್ಕೆ ಇದಕ್ಕೆ ಸಂಬಂಧ ಇಲ್ಲ. ಅದು ಯೋಜನೆ ಬೇರೆ, ಅದು ಪೂರ್ತಿ ಆಗಬೇಕೆಂದರೆ ಇನ್ನು ಆರು ತಿಂಗಳು ಆಗುತ್ತದೆ. ಅಷ್ಟು ಹೊತ್ತಿಗೆ ಬೇಸಿಗೆ ಮುಗಿದು ಹೋಗಿರುತ್ತೆ. ಅಷ್ಟರೊಳಗೆ ನಾವು ಪರಗೋಡಿನಿಂದ ನೀರು ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಬೇಸಿಗೆಯಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ಈ ಮೂರು ತಿಂಗಳಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ, ಅದಕ್ಕೆ ಹೆಚ್ಚು ಹಣ ಕೊಡಬೇಕೆಂದು ಹೇಳುವುದು. ಪರಗೋಡು ಯೋಜನೆ ಮುಗಿಸಬೇಕೆಂದರೆ ಇನ್ನೂ ನಾಲ್ಕು ತಿಂಗಳುಗಳಾಗುತ್ತವೆ.

ಶ್ರೀ ಬಿ.ಸತ್ಯನಾರಾಯಣ : ಸನ್ಮಾನ್ಯ ಸದಸ್ಯರಿಗೆ ಅಧ್ಯಕ್ಷರ ಮೂಲಕ ಹೇಳುವುದು, ಬೆಳಿಗ್ಗೆ ಈ ಬಗ್ಗೆ ಸಮಗ್ರ ಚರ್ಚೆಯಾಗಿದೆ. ಹಣ ಕೊಡುತ್ತೇವೆ. ಎಂದು ಹೇಳಿದ್ದೇವೆ, ಕೊಟ್ಟಿದ್ದೇವೆ. ಕಡಿಮೆ ಬಂದರೆ ಕೊಡುತ್ತೇವೆ.

ಶ್ರೀ ಜೆ.ಎಚ್.ಶ್ರೀರಾಮರೆಡ್ಡಿ : ಆಯಿತು.